C.R.P.67

| Form No.4 (Civil) Deposition Sheets (R.P.No.57) |
|---|

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಸಂಖ್ಯೆಃ 101/2023 C/W 113/2023**

ಪ್ರಾಸಾ. 18 ಚಾಸಾ. 30

| | |
|---|---|
| ಸಾಕ್ಷಿದಾರರ ಹೆಸರು | ಮೋಹನ್ |
| ತಂದೆಯ ಹೆಸರು | ಕಾಳೇಗೌಡ |
| ವಯಸ್ಸು | 36 ವರ್ಷಗಳು |
| ಉದ್ಯೋಗ | ವ್ಯವಸಾಯ |
| ವಾಸ | ಸಿದ್ದಯ್ಯನ ಕೊಪ್ಪಲು |

ಸಾಕ್ಷಿಯನ್ನು ದಿನಾಂಕಃ 30.08.2025 ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಈಗ ನೋಟೀಸನ್ನು ನೋಡುತ್ತಿದ್ದು, ಸದರಿ ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ. ಸದರಿ ಈಗಾಗಲೇ ನೋಟೀಸನ್ನು ನಿಪಿ-24 ಎಂದು, ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಮಹಜರನ್ನು ನೋಡುತ್ತಿದ್ದು, ಸದರಿ ಮಹಜರಿನಲ್ಲಿಯೂ ಸಹ ನನ್ನ ಸಹಿ ಇರುತ್ತದೆ. ಸಾಕ್ಷಿ ತನ್ನ ಸಹಿ ಗುರುತಿಸಿದ್ದು ಮಹಜರನ್ನು ಈಗಾಗಲೇ ನಿಪಿ-25 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-25(ಬಿ) ಎಂದು ಗುರುತಿಸಲಾಯಿತು.

2. 2022 ರಲ್ಲಿ ಮಂಡ್ಯದ ಪೇಟೆ ಬೀದಿ ಬಳಿ ಹೋಗುತ್ತಿದ್ದಾಗ ಪೊಲೀಸರು ನನ್ನ ಸಹಿ ಮಾಡಿಸಿರುತ್ತಾರೆ. ಸದರಿ ದಾಖಲೆಗಳಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಮೊಬೈಲ್ ಗಳನ್ನು ಪರಿಶೀಲಿಸಿರುವುದಿಲ್ಲ. ಈಗ ಮು.ಮ.12 ಓಪೋ ಕಂಪನಿಯ

ಮೊಬೈಲನ್ನು ನೋಡುತ್ತಿದ್ದು, ಸದರಿ ಮೊಬೈಲನ್ನು ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಸದರಿ ಫೋಟೋವಿನಲ್ಲಿ ತಾನು ಇರುವುದಾಗಿ ಸಾಕ್ಷಿ ನುಡಿದಿರುತ್ತಾರೆ. ಮತ್ತು ಪೊಲೀಸರು ನನಗೆ ಹೇಳಿದ್ದರಿಂದ ಸದರಿ ಫೋಟೋಗಳಲ್ಲಿ ನಿಂತಿರುತ್ತೇನೆ. ಸದರಿ ಫೋಟೋಗಳನ್ನು ನಿಪಿ-35(1 ಮತ್ತು 2) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ದಿನಾಂಕಃ05.12.2022 ರಂದು ಸಿ.ಇ.ಎನ್. ಕ್ರೈಂ ಪೊ.ಠಾಣೆ, ಸೈಬರ್ ಫಾರೆನ್ಸಿಕ್ ಲ್ಯಾಬ್ ಕೊಠಡಿಯಲ್ಲಿ ಪೊಲೀಸರು ಒಂದು ವಿವೋ ಹಾಗೂ ಓಪೋ ಕಂಪನಿಯ ಮೊಬೈಲ್ ಗಳನ್ನು ತನಿಖೆ ಕಾಲದಲ್ಲಿ ತನಿಖಾಧಿಕಾರಿಯವರು ಅಮಾನತುಪಡಿಸಿಕೊಂಡಿದ್ದು, ಅದನ್ನು ಪರಿಶೀಲಿಸಲು ಚಾಸಾ-29 ರವರ ಮುಂದೆ ಹಾಜರುಪಡಿಸಿದಾಗ ಅದನ್ನು ಸದರಿ ಚಾಸಾ-29 ರವರು ನಮ್ಮ ಸಮಕ್ಷಮ ಬೆಳಿಗ್ಗೆ 11.00 ರಿಂದ 2.30 ಗಂಟೆಯವರೆಗೆ ಕಾಲ್ ರೆಕಾರ್ಡಿಂಗ ನ್ನು ಪರಿಶೀಲಿಸಿ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರಿಗೆ ನಾನು ಮತ್ತು ಚಾಸಾ-29, ನಾನು ಮತ್ತು ಚಾಸಾ-49 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ಚಾಸಾ-29 ರವರು ಪರಿಶೀಲಿಸಿದ ಮೊಬೈಲ್ ಗಳ ಪೈಕಿ ಒಂದು ಮೊಬೈಲ್ ನ್ನು ಈ ದಿನ ನ್ಯಾಯಾಲಯದಲ್ಲಿ ನೋಡುತ್ತಿರುವ ಮು.ಮ.12 ಮೊಬೈಲ್ ಆಗಿರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತಹ ಮಹಜರ್ ಮಾಡುವ ಸಂದರ್ಭದಲ್ಲಿ ಹಾಜರಿದ್ದು, ಸದರಿ ಮಹಜರಿನಲ್ಲಿ ಬರೆದಿರುವ ವಿಚಾರ ತಿಳಿದುಕೊಂಡು ನಂತರ ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿತನ ಪರ ಶ್ರೀ ಹೆಚ್.ಡಿ.ಆರ್. ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮಂಡ್ಯ.